# ಕರ್ನಾಟಕ ಸರ್ಕಾರ

ಸಂ: ಕಂಇ 158 ಟಿಎನ್‌ಆರ್ 2020

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನ ಸೌಧ,
ಬೆಂಗಳೂರು, ದಿನಾಂಕ: 09-07-2020

## ಟಿಪ್ಪಣಿ

ವಿಷಯ: 50 ವರ್ಷಕ್ಕಿಂತ ಕಡಿಮೆ ವಯಸ್ಸಿನ ಗ್ರೂಪ್ 'ಎ', 'ಬಿ' ಮತ್ತು 'ಸಿ' ವೃಂದದ ಅಧಿಕಾರಿಗಳ ಮತ್ತು ಸಿಬ್ಬಂದಿ ವರ್ಗದವರ ಮಾಹಿತಿ ಒದಗಿಸುವ ಬಗ್ಗೆ.

*****

1. ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೆಂಗಳೂರು ನಗರ ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿನ ಅನ್-ಲಾಕ್-2 (Unlock-2) ಅವಧಿಯಲ್ಲಿ, ಕೋವಿಡ್-19 ಸಾಂಕ್ರಾಮಿಕ ರೋಗ ಹರಡುವಿಕೆ ನಿಯಂತ್ರಿಸುವ ಉದ್ದೇಶಕ್ಕಾಗಿ ಕಣ್ಗಾವಲು ಮತ್ತು ಸಾರ್ವಜನಿಕ ಆರೋಗ್ಯ ಪ್ರಯತ್ನಗಳನ್ನು ಹೆಚ್ಚಿಸುವ ಅಗತ್ಯವಿರುತ್ತದೆ.

2. ಈ ಚಟುವಟಿಕೆಗಳಿಗಾಗಿ ಸಿಬ್ಬಂದಿಗಳ ಅವಶ್ಯಕತೆ ಇರುವುದರಿಂದ ತಕ್ಷಣವೇ ತಮ್ಮ ಅಧೀನದಲ್ಲಿ ಮತ್ತು ತಮ್ಮ ಇಲಾಖೆಯ ಎಲ್ಲ ಸಾರ್ವಜನಿಕ ವಲಯದ ಘಟಕಗಳಲ್ಲಿ ಮತ್ತು ಅನುದಾನಿತ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹಾಗೂ ಬೆಂಗಳೂರು ನಗರ, ಬೆಂಗಳೂರು ನಗರ ಜಿಲ್ಲೆ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿಯೇ ವಾಸವಾಗಿರುವ 50 ವರ್ಷಕ್ಕಿಂತ ಕಡಿಮೆ ವಯಸ್ಸಿನ ಗ್ರೂಪ್ 'ಎ', 'ಬಿ' ಮತ್ತು 'ಸಿ' ವೃಂದದ ಅಧಿಕಾರಿಗಳಮತ್ತು ಸಿಬ್ಬಂದಿಗಳ ಮಾಹಿತಿಯನ್ನು (ಗರ್ಭಿಣಿ, ಬಾಣಂತಿಯರು ಹಾಗೂ ವಿಕಲಚೇತನರನ್ನು ಹೊರತುಪಡಿಸಿ) 2 ದಿನಗಳೊಳಗಾಗಿ ಈ ಕೆಳಕಂಡ ಕೋಷ್ಟಕದಂತೆ ಮಾಹಿತಿ (ಎಕ್ಸೆಲ್ ಶೀಟ್ ನಲ್ಲಿ) ಒದಗಿಸಲು ಸೂಚಿಸಲಾಗಿದೆ.

| ಕ್ರ. ಸಂ. | ಹೆಸರು | ಲಿಂಗ | ವಯಸ್ಸು | ವೃಂದ | ಪದನಾಮ | ಮನೆ ವಿಳಾಸ | ವಾಸ ಸ್ಥಳದ ವಾರ್ಡ್ ಸಂಖ್ಯೆ | ಮೊಬೈಲ್ ಸಂಖ್ಯೆ |
|---|---|---|---|---|---|---|---|---|
| | | | | | | | | |

3. ಪ್ರತಿ ಇಲಾಖೆ / ಸಂಸ್ಥೆಯಲ್ಲಿನ ಶೇ. 25 ರಿಂದ 50 ಕ್ಕಿಂತ ಹೆಚ್ಚದಂತೆ ಸಿಬ್ಬಂದಿ ಸಂಖ್ಯೆಯನ್ನು ಇಲಾಖೆ / ಸಂಸ್ಥೆಯ ಅಗತ್ಯ ಕೆಲಸಗಳಿಗಾಗಿ ಉಳಿಸಿಕೊಳ್ಳಬಹುದು. ಇತರ ಎಲ್ಲ ಅಧಿಕಾರಿಗಳ ಪಟ್ಟಿಯನ್ನು (ಗುಂಪು ಎ, ಬಿ ಮತ್ತು ಸಿ ಮಟ್ಟದ ಒಟ್ಟು ಸಿಬ್ಬಂದಿಗಳಲ್ಲಿ ಶೇ. 50 ರಿಂದ 75) ಸಲ್ಲಿಸಬೇಕು ಎಂದು ನಿರ್ದೇಶಿಸಲಾಗಿದೆ.

4. ಅವರು ಪೂರ್ಣ ಸಮಯದ ಆಧಾರದ ಮೇಲೆ ವಿಪತ್ತು ನಿರ್ವಹಣಾ ಕಾಯ್ದೆಯ ಆದೇಶದಡಿಯಲ್ಲಿ ಕೆಲಸ ನಿರ್ವಹಿಸುವ ಅಗತ್ಯವಿದೆ ಮತ್ತು ಯಾವುದೇ ವಿನಾಯಿತಿ ಲಭ್ಯವಿರುವುದಿಲ್ಲ. ಮಾಹಿತಿಯನ್ನು ಕಳುಹಿಸುವ ಮೊದಲು ಪ್ರಸ್ತುತ ವಿಳಾಸ, ವಾರ್ಡ್ ಸಂಖ್ಯೆ ಮತ್ತು ಮೊಬೈಲ್ ಸಂಖ್ಯೆಯನ್ನು ಸಂಬಂಧಪಟ್ಟ ಸಿಬ್ಬಂದಿಯಿಂದ ಖಚಿತಪಡಿಸಿಕೊಂಡು ಪರಿಶೀಲಿಸಬೇಕು.

5. ದಿನಾಂಕ 10.07.2020 ರಂದು ಸಂಜೆ 5 ಗಂಟೆಯೊಳಗೆ ಮಾಹಿತಿಯನ್ನು ಆಯುಕ್ತರು, ಬಿಬಿಎಂಪಿ ಇವರಿಗೆ ಇಮೇಲ್ ಮೂಲಕ ತಲುಪಿಸುವುದನ್ನು ಖಚಿತಪಡಿಸಿಕೊಳ್ಳುವುದು. ಅನುಸರಣೆಯ ವರದಿಯನ್ನು ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರಿಗೆ ದಯವಿಟ್ಟು ತಿಳಿಸುವುದು.

**(ತ.ಮ. ವಿಜಯ್ ಭಾಸ್ಕರ್)**
ಸರ್ಕಾರದ ಮುಖ್ಯ ಕಾರ್ಯದರ್ಶಿ ಮತ್ತು
ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ
ರಾಜ್ಯ ಕಾರ್ಯಕಾರಿ ಸಮಿತಿಯ ಅಧ್ಯಕ್ಷರು.

**ಇವರಿಗೆ,**
ಕರ್ನಾಟಕ ಸರ್ಕಾರದ ಎಲ್ಲ ಇಲಾಖೆಗಳ ಮುಖ್ಯಸ್ಥರು

**ಪ್ರತಿಯನ್ನು ಮಾಹಿತಿಗಾಗಿ / ಅಗತ್ಯ ಕ್ರಮಕ್ಕಾಗಿ:**

ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿ / ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿಗಳು (ಗೃಹ ಇಲಾಖೆ, ಆರ್ಥಿಕ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ ಇಲಾಖೆ, ಸಾರಿಗೆ ಆಯುಕ್ತಾಲಯ, ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ) ಹೊರತುಪಡಿಸಿ) - ಈ ನಿರ್ದೇಶನದ ಸಮಯೋಚಿತ ಅನುಸರಣೆ ಖಚಿತಪಡಿಸಿಕೊಳ್ಳುವುದು.